ಒ ಎಸ್ ನಂ. **59/2017** ಪಿ ಡಬ್ಲ್ಯೂ-**1**

**ದಿನಾಂಕಃ 18.01.2021.ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ-ಶ್ರೀ ಡಿ ಕೆ ಎಂ 1 ನೇ ಪ್ರತಿವಾದಿ ಪರ ವಕೀಲರಿಂದಃ**

ದಾವಾ ಸ್ವತ್ತುಗಳ ಚೆಕ್ಕು ಬಂದಿಯನ್ನ ನಾನು ನನ್ನ ಮಕ್ಕಳು ಮತ್ತು ಇತರರಿಂದ ತಿಳಿದುಕೊಂಡಿರುತ್ತೇನೆ. ಚೆಕ್ಕುಬಂದಿಗಳನ್ನ ಹೇಳಲಾಗುತ್ತದಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಬಾಲಕೃಷ್ಣ ವ್ಯಾಪಾರ, ವಹಿವಾಟು ಮತ್ತು ಕಾಟ್ರಾಂಕ್ಟ್ ಕೆಲಸಗಳನ್ನೆಲ್ಲಾ ಮಾಡುತ್ತಾರೆ ಎಂದರೆ ಸಕ್ಷಿ ನಾವು ಒಟ್ಟಿಗೆ ಇದ್ದಾಗ ಮಾಡುತ್ತಿದ್ದರು ಎನ್ನುತ್ತಾರೆ. ನಿಮ್ಮ ಮದುವೆ ಆಗುವ ಸಮಯದಲ್ಲಿ ನಿಮ್ಮ ಎಲ್ಲಾ ಸಹೋದರರಿಗೆ ಮದುವೆ ಆಗಿತ್ತಾ ಎಂದರೆ ಸಾಕ್ಷಿ ಇನ್ನೂ ಆಗಿರಲಿಲ್ಲ ಎನ್ನುತ್ತಾರೆ. ಬಾಲಕೃಷ್ಣ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸ ಇದ್ದಾರೆ ಎಂದರೆ ಸರಿ. ಪುಟ್ಟರಾಜು ಮತ್ತು ಮಂಜೇಗೌಡ ಹಾಗೂ ಬಲರಾಮೇಗೌಡ ಮತ್ತು ಸಹೋದರರೆಲ್ಲಾ ಪ್ರತ್ಯೇಕವಾಗಿ ಮನೆ ಕಟ್ಟಿಕೊಂಡು ವಾಸ ಇದ್ದಾರೆ ಎಂದರೆ ಸಾಕ್ಷಿ ಪ್ರತ್ಯೇಕವಾಗಿ ವಾಸ ಇದ್ದಾರೆ ಆದರೆ ಜಮೀನುಗಳೆಲ್ಲಾ ಒಟ್ಟಿಗೆ ಮಾಡುತ್ತೇವೆ ಎನ್ನುತ್ತಾರೆ. ಕಳೆದ 24 ವರ್ಷಗಳಿಂದ ಸಹೋದರರೆಲ್ಲಾ ಪ್ರತ್ಯೇಕವಾಗಿ ವಾಸ ಇದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಎಷ್ಟು ವರ್ಷದಿಂದ ಅವರು ಬೇರೆ ಇದ್ದಾರೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ನಿಮ್ಮ ತಂದೆ ಬದುಕಿರುವಾಗಲೇ ಸಹೋದರರೆಲ್ಲಾ 1996 ನೇ ಇಸವಿಯಲ್ಲಿ ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. 1996 ನೇ ಇಸವಿಯಿಂದ ಅವರವರ ಭಾಗಕ್ಕೆ ಬಂದಿರುವ ಸ್ವತ್ತುಗಳನ್ನ ಪ್ರತ್ಯೇಕವಾಗಿ ಸಹೋದರರು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಅದಕ್ಕೆ ಅನುಗುಣವಾಗಿ ದಿಃ 12.06.2000 ದಂದು ಪಂಚಾಯಿತಿ ಪಾರಿಕತ್ ನ್ನು

ಕೂಡ ಬರೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಹಾಗೆ ಪ್ರತ್ಯೇಕವಾಗಿ ವಿಭಾಗ ಪತ್ರ ಬರೆದುಕೊಂಡಿರುವ ಕಾರಣದಿಂದಲೇ ನಿಮ್ಮ ದಾವಾ ಅರ್ಜಿಯಲ್ಲಿ ಯಾವುದೇ ನೋದಾಯಿತ ವಿಭಾಗ ಪತ್ರ ಆಗಿಲ್ಲ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ದಿಃ 12.06.2000 ನೇ ಇಸವಿಯ ಪಾಲು ಪಾರಿಕತ್ ನಂತೆ 2001 ನೇ ಇಸವಿಯಲ್ಲಿ ಪತ್ರದಂತೆ ಎಲ್ಲಾ ಸಹೋದರರ ಹೆಸರಿಗೆ ಕಂದಾಯ ದಾಖಲಾತಿಗಳ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿ ಸರಿಯಲ್ಲ ಅದೇನು ಮಾಡಿಕೊಂಡಿದ್ದಾರೋ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗಳು ಯಾರ ಯಾರ ಹೆಸರಿನಲ್ಲಿ ಇವೆ ಎಂದು ಗೊತ್ತಾ ಎಂದರೆ ಸಾಕ್ಷಿ ಯಾರ ಹೆಸರಿನಲ್ಲಿ ಇವೆ ಎಂದು ಗೊತ್ತಿಲ್ಲ ಆದರೆ ನನ್ನ ತಂದೆ ಇದ್ದಾಗಲೇ ಸಂಪಾದಿಸಿದ ಸ್ವತ್ತುಗಳು ಎನ್ನುತ್ತಾರೆ.

ಬಾಲಕೃಷ್ಣರವರ ಭಾಗಕ್ಕೆ ಬಂದ ಸ್ವತ್ತುಗಳನ್ನ ಬಾಲಕೃಷ್ಣ ಮತ್ತು ಅವರ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೇನು ಗೊತ್ತು ಸ್ವಾಮಿ ಎನ್ನುತ್ತಾರೆ. ದಾವಾ ಐಟಂ ನಂ.1 ಸರ್ವೆ ನಂಬರ್ಃ 52/2, ಐಟಂ ನಂ. 2, ಸರ್ವೆ ನಂಬರ್ಃ 58 ಈ ಸ್ವತ್ತುಗಳನ್ನ ಬಾಲಕೃಷ್ಣರವರ ಮಕ್ಕಳು ಎನ್. ಜೆ. ಕೃಷ್ಣೇಗೌಡರ ಬಿನ್ ಜವರೇಗೌಡರವರಿಗೆ ದಿಃ 21.11.2016 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೇನು ಗೊತ್ತು ಎನ್ನುತ್ತಾರೆ. ನಾನು ಮತ್ತು ನನ್ನ ಗಂಡ ರಾಜೇಗೌಡ ಉಃ ಹುಚ್ಚೇಗೌಡ ಅನ್ಯೋನ್ಯವಾಗಿದ್ದೇವೆ. ಹುಚ್ಚೇಗೌಡ ಉಃ ರಾಜೇಗೌಡ ಪಂಚಾಯಿತಿ ಪಾಲು ಪಾರಿಕತ್ ಆಗುವಾಗ ಸಾಕ್ಷಿಯಾಗಿ ಸಹಿ ಕೂಡ ಮಾಡಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೇನೂ ಹೇಳಿಲ್ಲ ಎನ್ನುತ್ತಾರೆ. ಮೌಖಿಕ ವಿಭಾಗ ಆಗುವಾಗ ಮತ್ತು ಪಾಲು ಪಾರಿಕತ್ ಆಗುವಾಗ ನೀವು ಕೂಡ ಖುದ್ದಾಗಿ ಹಾಜರು ಇದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ

ಎನ್ನುತ್ತಾರೆ. ಹಾಜರಿದ್ದರೂ ಕೂಡ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ.

ಬಾಲಕೃಷ್ಣರವರ ಮಕ್ಕಳು ದಿಃ 26.11.2016 ರಂದು ಡಿ. ತುಮಕೂರು ಗ್ರಾಮದ ಸರ್ವೆ ನಂಬರ್ಃ 155 ಸ್ವತ್ತನ್ನ ಎನ್ ಜೆ ಮೂರ್ತಿ ಬಿನ್ ಜವರೇಗೌಡರ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೇನು ಗೊತ್ತು ಎನ್ನುತ್ತಾರೆ. ಮಂಜೇಗೌಡ ಮತ್ತು ಬಲರಾಮೇಗೌಡ ಹಾಗೂ ಕುಮಾರಸ್ವಾಮಿ ಇವರುಗಳು ತಮ್ಮ ಭಾಗಕ್ಕೆ ಬಂದಿದ್ದ ಸ್ವತ್ತುಗಳನ್ನ ಈ ದಾವೆ ಹೂಡುವ 10 ಹಿಂದೆಯೇ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಕರಿಕ್ಯಾತನಹಳ್ಳಿಯ ಸರ್ವೆ ನಂಬರ್ಃ 23/2 ಮತ್ತು ಸರ್ವೆ ನಂಬರ್ಃ 24/32 ಸ್ವತ್ತುಗಳನ್ನ ಬಲರಾಮೇಗೌಡ ಈಗಾಗಲೇ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಗಂಡು ಮಕ್ಕಳು ಎಲಾ ಸೇರಿ ಏನು ಮಾಡಿಕೊಂಡಿದ್ದಾರೋ ನನಗೇನು ಗೊತ್ತು ಎನ್ನುತ್ತಾರೆ. ಕೊಂಡಿರುವವರು ಈಗ ಆ ಸ್ವತ್ತುಗಳ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಅದೇನೋ ನಾನು ನೋಡಿಲ್ಲ ಎನ್ನುತ್ತಾರೆ.

ತಿಮ್ಮಮ್ಮ ನಿನ್ನ ಅಕ್ಕ ಎಂದರೆ ಸರಿ. ಅವರು ಮೃತ ಪಟ್ಟು ಹಲವು ವರ್ಷಗಳು ಆಗಿವೆ ಸರಿಯಾಗಿ ಗೊತ್ತಿಲ್ಲ. ಅವರಿಗೆ ಮೂರು ಜನ ಮಕ್ಕಳು ಇದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಹಾಸನದ ಸಾಲಗಾಮೆಯಲ್ಲಿರುವ ಸರ್ವೆ ನಂಬರ್ಃ 143 ಸ್ವತ್ತನ್ನ ಈ ದಾವೆಯಲ್ಲಿ ಸೇರಿಸಿದ್ದಿರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಲಗಾಮೆಯಲ್ಲಿ ಎಷ್ಟು ಆಸ್ತಿಗಳು ಇವೆ ಮತ್ತು ಅವುಗಳ ಸರ್ವೆ ನಂಬರ್ ವಿಸ್ತೀರ್ಣ ಗೊತ್ತಾ ಎಂದರೆ ಸಾಕ್ಷಿ ಮನೆ, ಸೈಟು ಮತ್ತು ಜಮೀನು ಇದೆ ಆದರೆ ಅವುಗಳ ನಂಬರ್ ಮತ್ತು ವಿಸ್ತಿರ್ಣ ಗೊತ್ತಿಲ್ಲ ಎನ್ನುತ್ತಾರೆ.

ಸಾಲಗಾಮೆಯ ಆಸ್ತಿಗಳ ದಾಖಲೆಗಳನ್ನ ದಾವಾದಲ್ಲಿ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಹಾಜರು ಮಾಡಿರುವ ನಿಪಿ-12,13,16 ಮತ್ತು 17 ರಲ್ಲಿನ ಆರ್ ಟಿ ಸಿ ಗಳು ಅಂಭುಜಾಕ್ಷಿ ರವರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿ ಯಾರಿಗೆ ಗೊತ್ತು ಅವರ ಹೆಸರಿಗೆ ಬರೆಸಿರಬಹುದು ಎನ್ನುತ್ತಾರೆ. 2001 ನೇ ಇಸವಿಯಿಂದ ಆ ಆಸ್ತಿಗಳು ಅಂಭುಜಾಕ್ಷಿರವರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿ ಬರೆಸಿರಬಹುದು ನನಗೇನು ಗೊತ್ತು ಎನ್ನುತ್ತಾರೆ. ಮಂಜೇಗೌಡ, ರಾಮಕೃಷ್ಣೇಗೌಡ, ಬಲರಾಮೇಗೌಡ ಮತ್ತು ಪುಟ್ಟರಾಜುರವರು  ಮಾರಾಟ ಮಾಡಿರುವ ಆಸ್ತಿಗಳನ್ನ ಈ ದಾವೆಯಲ್ಲಿ ಬೇಕಂತಲೇ ನೀವು ಸೇರಿಸಿಲ್ಲ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿ ಕೆ ಪಿ ರಾಮಕೃಷ್ಣ ಹಾಸನದಲ್ಲಿ ಮತ್ತು ಚನ್ನರಾಯಪಟ್ಟಣದಲ್ಲಿ ಆಸ್ತಿಗಳನ್ನ ಕೊಂಡಿದ್ದಾರೆ ಎಂದರೆ ಸಾಕ್ಷಿ  ಅವನ ಹೆಂಡತಿ ಕೆಲಸದಲ್ಲಿ ಇದ್ದಾಳೆ ಹಾಗಾಗಿ ಅವರು ಕೊಂಡಿದ್ದಾರೆ ಎನ್ನುತ್ತಾರೆ. ಆ ಆಸ್ತಿಗಳು ಕೆ ಪಿ ರಾಮಕೃಷ್ಣನ ಹೆಸರಿನಲ್ಲೇ ಇವೆ ಎಂದರೆ ಸಾಕ್ಷಿ ಕೊಂಡುಕೊಂಡು ಅವರ ಹೆಸರಿಗೆ ಬರೆಸಿದ್ದಾರೆ ಎನ್ನುತ್ತಾರೆ. ಅವರ ಹೆಸರಿನಲ್ಲಿ ಇರುವ ಆಸ್ತಿಗಳನ್ನ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ  ಇತ್ತೀಚೆಗೆ ತೆಗೆದುಕೊಂಡಿರಬೇಕು ಎನ್ನುತ್ತಾರೆ.  ಪುಟ್ಟರಾಜು, ರಾಮಕೃಷ್ಣೇಗೌಡ ಮತ್ತು ಬಾಲಕೃಷ್ಣ ನಿಮ್ಮ ಜೊತೆ ಚೆನ್ನಾಗಿದ್ದಾರೆ ಎಂದರೆ ಸಾಕ್ಷಿ ಹೌದು ವಿಶ್ವಾಸದಿಂದ ಇದ್ದೇವೆ ಎನ್ನುತ್ತಾರೆ. ಹಾಗೆ ವಿಶ್ವಾಸದಿಂದ ಇರುವ ಕಾರಣ ಅವರು ಮಾರಾಟ ಮಾಡಿರುವ ಮತ್ತು ತೆಗೆದುಕೊಂಡಿರುವ ಆಸ್ತಿಗಳನ್ನ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 12 ನಲ್ಲಿರುವ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಯಾರ ಹೆಸರಿನಲ್ಲಿ ಇವೆ

ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಐಟಂ ನಂ. 12 ರಿಂದ 14 ರವರೆಗೆ ಇರುವ ಸ್ವತ್ತುಗಳ ಸಂಬಂಧ ಯಾವುದೇ ದಾಖಲೆಗಳನ್ನ ನೀವು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಎಲ್ಲ ದಾಖಲೆಗಳನ್ನು ಕೊಟ್ಟಿದ್ದೆನೆ ಎನ್ನುತ್ತಾರೆ. ಮಂಜೆಗೌಡ, ಕುಮಾರ ಸ್ವಾಮಿ, ರಾಮಕೃಷಣೇಗೌಡ ಇವರು ಪ್ರತ್ಯೇಕವಾಗಿ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಗಳನ್ನ ಇಟ್ಟುಕೊಂಡಿದ್ದಾರೆ ಎಂದರೆ ಸರಿ. ಅವುಗಳು ಅವರವರ ಹೆಸರಿನಲ್ಲೇ ಇವೆ ಎಂದರೆ ಸಾಕ್ಷಿ ಬರೆಸಿಕೊಂಡಿದ್ದಾರೇನೋ ಎನ್ನುತ್ತಾರೆ. ಅವರ ಟ್ರ್ಯಾಕ್ಟರ್ ಗಳು ಅವರ ಸ್ವಂತ ಗಳಿಕೆಯಿಂದ ಕೊಂಡಿರುವ ವಾಹನಗಳಾಗಿವೆ ಎಂದರೆ ಸಾಕ್ಷಿ ಅವರು ಹೇಗೆ ತೆಗೆದುಕೊಂಡರೋ ನನಗೇನು ಗೊತ್ತು ಎನ್ನುತ್ತಾರೆ. ನೀವು ಬೇಕೆಂದೆ ಆ ವಾಹನಗಳನ್ನ ಬಿಟ್ಟು ಬಾಲಕೃಷ್ಣ ಮತ್ತು ಅವರ ಕುಟುಂಬದ ಹೆಸರಿನಲ್ಲಿ ಇರುವ ವಾಹನಗಳನ್ನು ಮಾತ್ರ ಈ ದಾವೆಯಲ್ಲಿ ಸೇಸಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನನ್ನ ತಾಯಿ 1996 ರಲ್ಲಿ ತೀರಿಕೊಂಡಿದ್ದಾರೆ. ಯಾವ ತಿಂಗಳು ಎಂದು ಗೊತ್ತಿಲ್ಲ. ಮಂಜೇಗೌಡ, ರಾಮಕೃಷ್ಣೇಗೌಡ ಮತ್ತು ಕುಮಾರ ಸ್ವಾಮಿ ತಮ್ಮ ಭಾಗದ ಸ್ವತ್ತುಗಳನ್ನು ಆಧಾರ ಮಾಡಿ ಬ್ಯಾಂಕ್ ನಲ್ಲಿ ಸಾಲ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಅವರು ಮಾಡಿಕೊಂಡಿದ್ದಾರೇನೋ ಎನ್ನುತ್ತಾರೆ. ಅವರು ಬ್ಯಾಂಕ್ ನ ಪರವಾಗಿ ಅಡಮಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದನ್ನು ಪ್ರಶ್ನಿಸಿಯೇ ನನಗೆ ಭಾಗ ಬೇಕು ಎಂದು ಈ ದಾವ ಹೂಡಿದ್ದೇನೆ ಎನ್ನುತ್ತಾರೆ. ಬ್ಯಾಂಕ್ ನವರು ಆ ಸಾಲಗಳನ್ನು ಪಾವತಿ ಮಾಡಿಲ್ಲ ಎಂದು ಮಂಜೇಗೌಡ ಮತ್ತು ಪುಟ್ಟರಾಜು ರವರ ಮೇಲೆ ದಾವೆಯನ್ನೂ ಕೂಡ ಹೂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈಗಲೂ ಅದು ಚಾಲ್ತಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಕೆನರಾ ಬ್ಯಾಂಕ್ ನವರು ಒ ಎಸ್ ನಂ. 483/2015

ಮತ್ತು ಕಾವೇರಿ ಗ್ರಾಮೀಣ ಬ್ಯಾಂಕಲ್ ನವರು ಒ ಎಸ್ ನಂ. 14/2014 ರಲ್ಲಿ ದಾವೆ ಹೂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ.

(ವಾದಿಗೆ ಅವಶ್ಯಕ ಪಕ್ಷಗಾರರನ್ನಾಗಲೀ ಅಥವಾ ಬಿಟ್ಟಿರುವ ಕುಟುಂಬದ ಆಸ್ತಿಗಳನ್ನ ಈ ದಾವೆಯಲ್ಲಿ ಸೇರಿಸಲು ಅವಕಾಶ ನೀಡಲಾಗಿದೆ).

**ಮುಂದುವರೆದ ಪಾಟೀ ಸವಾಲನ್ನ ಮುಂದೂಡಲಾಯಿತು.**

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ, ಚನ್ನರಾಯಪಟ್ಟಣ

OS 59/2017
PW-1